# ಗುಳಿಕೆನ್ನೆ ನಟನ ವಿಚಿತ್ರ ಇನಿಂಗ್ಸ್

ತಾರಾ ಹೋಟೆಲ್ ಎದುರು ಸೂಪರ್‌ಬೈಕ್ ನಿಂತಿತು. ಸಲಾಮು ಹೊಡೆಯಲು ನಿಂತಿದ್ದ ಭದ್ರತಾ ಸಿಬ್ಬಂದಿಯಲ್ಲಿ ಕೃತಾರ್ಥ ಭಾವ. ಕಪ್ಪು ಹೆಲ್ಮೆಟ್ ತೆಗೆದದ್ದು ಸ್ಫುರದ್ರೂಪಿ ನಾಯಕ ನಟ.

ಬೆರಳೆಣಿಕೆಯಷ್ಟು ಸದಭಿರುಚಿಯ ಸಿನಿಮಾಗಳಲ್ಲಿ ಅಭಿನಯಿಸಿದ್ದ ನಟ ಅತ್ತ ಆರಕ್ಕೇರದ, ಇತ್ತ ಮೂರಕ್ಕೆ ಇಳಿಯದ ಸ್ಥಿತಿಯಲ್ಲಿ ಇದ್ದವರು. ಸಂಭ್ರಮದ 'ಮಳೆ'ಯಲ್ಲಿ ನೆಂದು ತೊಪ್ಪೆಯಾದ ಸಿನಿಮಾದ ಭಾಗವಾಗಿದ್ದ ಈ ನಟ, ಒಂದು ದಶಕದಲ್ಲಿ ಆಗಾಗ ಸುದ್ದಿ ಮಾಡಿದರೇ ವಿನಾ ಸದ್ದು ಮಾಡಲಿಲ್ಲ.

ನಗರ ಸಂವೇದನೆಯ ಸಿನಿಮಾಗಳನ್ನು ಮಾಡುವುದರಲ್ಲಿ ಕೈಪಳಗಿಸಿಕೊಂಡ ಜನಪ್ರಿಯ ನಿರ್ದೇಶಕರ ಮೂರ್‍ನಾಲ್ಕು ಸಿನಿಮಾಗಳಲ್ಲಿ ಅಭಿನಯದ ಸಾಣೆಗೆ ಸಿಕ್ಕ ಈ ನಟನನ್ನು ಅನೇಕ ಅವಕಾಶಗಳು ಹುಡುಕಿಕೊಂಡು ಬಂದವು. ಸದಾ ಉತ್ತಮ ಮೈಕಟ್ಟನ್ನು ಹೊಂದಿರುವುದು 'ಅಡ್ವಾಂಟೇಜ್'. ಮೊದಲ ನೋಟಕ್ಕೆ ತುಸು ಜೋಬದ್ರತನದ ಕಳೆ ಕಂಡರೂ ಅಭಿನಯ ಸೂಕ್ಷ್ಮತೆಯ ಬಗೆಗೆ ಎರಡು ಮಾತಿಲ್ಲ.

ಈ ಹಿನ್ನಲೆಯ ನಟ ಚಾಕೊಲೇಟ್ ಬಾಯ್ ಅನ್ನಿಸಿಕೊಂಡು, ಹಸಿರು ಪರಿಸರದಲ್ಲಿ ನಡೆಯುವ ತೆಳುವಾದ ಕಥಾಹಂದರದ ಕೆಲವು ಸಿನಿಮಾಗಳಲ್ಲಿ ಅಭಿನಯಿಸಿದರು. ಕೆಲವು ಗಂಡುವಿದ್ಯೆಗಳು ಗೊತ್ತಿದ್ದರೂ ಆ್ಯಕ್ಷನ್ ಹೀರೊ ಆಗುವ ಭಾಗ್ಯ ಈ ನಟನಿಗೆ ಸಿಗಲೇ ಇಲ್ಲ. ಬಹುಶಃ ಹೊಂಬಣ್ಣ ಹಾಗೂ ಗುಳಿಕೆನ್ನೆಯೇ ಅದಕ್ಕೆ ಅಡ್ಡ ಬಂದಿರಬೇಕು.

ವರ್ಷಗಳ ಹಿಂದೆ ಈ ನಟ ಸಹನಟಿಯ ಪ್ರೇಮಪಾಶದಲ್ಲಿ ಸಿಲುಕಿದರು. ಕುಳ್ಳಗಿನ ದೇಹದ ಹುಡುಗಿ ನಟಿಯಾಗುವ ಮೊದಲು ದಂತವೈದ್ಯೆ. 'ಪ್ರೇಮಕ್ಕೆ ಸೈ ಎಂದ ರೈ' ಎಂದು ಆಪ್ತೇಷ್ಟರು ಕೆಣಕಿದಾಗ ಕೆನ್ನೆ ಕೆಂಪೇರಿಸಿಕೊಂಡ ಹುಡುಗಿ.

ಪ್ರೇಮಕ್ಕೆ ಒಂದು ಮಟ್ಟದ ಪರ್ಮಿಟ್ಟು ಸಿಗುವಷ್ಟರಲ್ಲಿ ಸ್ಫುರದ್ರೂಪಿ ನಟನನ್ನು ಬಾಲಿವುಡ್ ಕೈಬೀಸಿ ಕರೆಯಿತು. ನಿರ್ಮಾಪಕರ ಮಗಳೇ ನಾಯಕಿ ಆದದ್ದರಿಂದ ಅಲ್ಲಿ ಹೇಳಿಕೊಳ್ಳುವಂಥ ಪಾತ್ರವೇನೂ ಇರಲಿಲ್ಲ.

ಆ ಹಿಂದಿ ಸಿನಿಮಾ ಕೆಲವು ತಿಂಗಳುಗಳ ಹಿಂದೆ ತೆರೆಕಂಡಿತು. ಮಲ್ಟಿಪ್ಲೆಕ್ಸ್ ಒಂದರಲ್ಲಿ ಟಿಕೆಟ್ ಕೊಳ್ಳಲು ಕನ್ನಡದ ಪ್ರೇಕ್ಷಕನೊಬ್ಬ ಹೋದ. 'ಆ ಸಿನಿಮಾ ನೋಡಲು ನೀವು ಒಬ್ಬರೇ ಬಂದಿರುವುದು. ಕನಿಷ್ಠ ಇನ್ನು ಏಳೆಂಟು ಜನರಾದರೂ ಬಂದರಷ್ಟೇ ಪ್ರದರ್ಶನ ಇರುತ್ತದೆ' ಎಂದು ಕೌಂಟರ್‌ನಲ್ಲಿ ಹೇಳಿಬಿಟ್ಟರು. ಅದಾದ ಕೆಲವು ದಿನಗಳ ನಂತರ ಅದೇ ನಟನ ಇನ್ನೊಂದು ಕನ್ನಡ ಸಿನಿಮಾ ತೆರೆಕಂಡಿತು. ಆಗ ಹಿಂದಿ ಸಿನಿಮಾ ವೈಫಲ್ಯ ಚರ್ಚೆಗೆ ಬಂತು. ನಾಯಕನ ಮುಖ ಕೆಂಪಾಯಿತು; ನಾಚಿಕೆಯಿಂದ ಅಲ್ಲ, ಕೋಪ–ಬೇಸರ ಬೆರೆತ ಭಾವದಿಂದ!

● **ವಿಶಾಖ ಎನ್.**

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68